# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ಸಾ.ಸ./4/2008-09 ದಿನಾಂಕ:27-02-2009

## -:: ಸಾಮಾನ್ಯ ಸಭೆ ::-

ದಿನಾಂಕ:27-02-2009ರಂದು ಶುಕ್ರವಾರ 11.00ಗಂಟೆಗೆ ಸರಿಯಾಗಿ ನಗರಸಭೆಯ ಸಭಾಂಗಣ ದಲ್ಲಿ ಮಾನ್ಯ ನಗರಸಭಾ ಅಧ್ಯಕ್ಷರಾದ **ಶ್ರೀ ಜಿ. ರಾಮಕೃಷ್ಣರವರ** ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆಯನ್ನು ಕರೆಯಲಾಗಿದ್ದು, ಸದರಿ ಸಭೆಯಲ್ಲಿ ಮಾನ್ಯ ನಗರಸಭಾ ಉಪಾಧ್ಯಕ್ಷರು ಹಾಗೂ ನಗರಸಭಾ ಸದಸ್ಯರುಗಳ ಸಮ್ಮುಖದಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಕೆಗಳು :-

| ಸದಸ್ಯರುಗಳು | ಹಾಜರಿ | ಗೈರು ಹಾಜರಿ | ಒಟ್ಟು |
|---|---|---|---|
| | 28 | 03 | 31 |

ಮೊದಲಿಗೆ ಪೌರಾಯುಕ್ತರಾದ **ಶ್ರೀ ಎಸ್.ಜಿ.ರಾಜಶೇಖರ್,** ಕೆ.ಎಂ.ಎ.ಎಸ್.ರವರು ಸಭೆಯಲ್ಲಿ ಮಾತನಾಡಿ, ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ನಗರಸಭಾ ಮಾನ್ಯ ಅಧ್ಯಕ್ಷರಾದ **ಶ್ರೀ ಜಿ.ರಾಮಕೃಷ್ಣರವರಿಗೆ** ಮತ್ತು ಉಪಾಧ್ಯಕ್ಷರು ಹಾಗೂ ನಗರಸಭಾ ಸದಸ್ಯರವರುಗಳಿಗೆ ಮತ್ತು ಪತ್ರಿಕಾ ಮಾಧ್ಯಮದವರಿಗೆ ಸ್ವಾಗತವನ್ನು ಕೋರಿ, ನಂತರ ಸಭೆಯನ್ನು ಅಧ್ಯಕ್ಷರ ಅನುಮತಿ ಮೇರೆಗೆ ಪ್ರಾರಂಭಿಸಲಾಯಿತು.

**ವಿಷಯ ಸಂಖ್ಯೆ:1**

ಸರ್ಕಾರದಿಂದ ಬಂದಿರುವ ಸುತ್ತೋಲೆಗಳನ್ನು ಓದಿ ದಾಖಲಿಸುವ ವಿಚಾರ.

**ತೀರ್ಮಾನ ಸಂಖ್ಯೆ:1**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಕರ್ನಾಟಕ ಸರ್ಕಾರದ (1) ರ ಸುತ್ತೋಲೆ ಸಂಖ್ಯೆ.ನಅಇ.02 ಜಿಇಎಲ್.2009 ಬೆಂಗಳೂರು ದಿನಾಂಕ:20-01-2009ರ ಸುತ್ತೋಲೆಯನ್ನು ಓದಿ ಅನುಮೋದಿಸಲಾಯಿತು. (2) ರ ಸುತ್ತೋಲೆ ಸಂಖ್ಯೆ ನಅಇ.37 ಎಸ್.ಎಫ್.ಸಿ.2008 ಬೆಂಗಳೂರು ದಿನಾಂಕ:03-02-2009ರ ರೀತ್ಯಾ ಸೂಚಿಸಿರುವಂತೆ ಮಾರ್ಗ ಸೂಚಿಗಳನ್ನು ಅಳವಡಿಸಿಕೊಂಡು, ಉಳಿದಿರುವ ಅನುದಾನದಲ್ಲಿ ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾಗೂ ಕಾರ್ಯನಿರ್ವಹಿಸದೇ ಇರುವ ಗುತ್ತಿಗೆದಾರರ ಮೇಲೆ ಕ್ರಮಕೈಗೊಳ್ಳಲು ಸೂಚಿಸಲಾಯಿತು. ಮತ್ತು ಉಳಿದಂತೆ ಸುತ್ತೋಲೆಗಳನ್ನು ಓದಿ ದಾಖಲಿಸಲಾಯಿತು.

ಸ್ಲಾಟರ್ ಹೌಸ್ ನಿರ್ಮಾಣಕ್ಕೆ ಸರ್ಕಾರದ ಆದೇಶದಂತೆ ಕ್ರಮ ವಹಿಸಲು , ಇಲ್ಲದಿದ್ದಲ್ಲಿ ಸೂಕ್ಯ ಸ್ಥಳವನ್ನು ಪರಿಶೀಲಿಸಿ ಸ್ಲಾಟರ್ ಹೌಸ್ ನಿರ್ಮಾಣ ಹಾಗೂ ಸುಲಭ ಶೌಚಾಲಯವನ್ನು ಸಹ ಸೂಕ್ತ ಸ್ಥಳವನ್ನು ಪರಿಶೀಲನೆ ಮಾಡಿ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವಂತೆ ಸದಸ್ಯರು ಸೂಚಿಸಿದರು.

**ವಿಷಯ ಸಂಖ್ಯೆ:2**

ಹಿಂದಿನ ಸಭೆಗಳ ನಡವಳಿಕೆಗಳನ್ನು ಓದಿ ದಾಖಲಿಸುವ ವಿಚಾರ,

**ತೀರ್ಮಾನ ಸಂಖ್ಯೆ:2**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ದಿನಾಂಕ:19-01-2009ರ ವಿಶೇಷ ಸಭೆಯಲ್ಲಿ ರಸ್ತೆಯ ಅಗಲೀಕರಣ ವಿಚಾರದಲ್ಲಿ ಶ್ರೀ ಆರ್. ರವಿಕುಮಾರ್, ಸದಸ್ಯರು ಕನಕದಾಸ ರಸ್ತೆ, ಅ.ನ.ಕೃಷ್ಣ ರಾವ್ ರಸ್ತೆ ಮತ್ತು ಕಿತ್ತೂರು ರಾಣಿ ಚನ್ನಮ್ಮ ರಸ್ತೆಗಳ ಅಗಲೀಕರಣಕ್ಕೆ ನಮ್ಮ ವಿರೋಧವಿದೆಯೆಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಹಾಗೂ ರಸ್ತೆಗಳ ಅಗಲೀಕರಣ ಅಳತೆಯಲ್ಲಿ 10 ಮೀಟರ್ ಎಂಬುದಾಗಿ ನಮೂದಾಗಿದ್ದು, ಅದರ ಬದಲಾಗಿ ರಸ್ತೆಯ ಮಧ್ಯೆಭಾಗದಿಂದ 6 ಮೀಟರ್ ಎಂದು ತಿದ್ದುಪಡಿ ಮಾಡಲು ಸೂಚಿಸಿದರು. ಮತ್ತು ದಿನಾಂಕ:16-02-2009ರ ವಿಶೇಷ ಸಭೆಯಲ್ಲಿ ಸರ್ಕಾರಿ ಆಸ್ಪತ್ರೆ ಹಾಗೂ

ಬಸ್‌ನಿಲ್ದಾಣವನ್ನು ನಾಗರಕೆರೆಯಲ್ಲಿ ನಿರ್ಮಾಣ ಮಾಡಲು ನಮ್ಮ ವಿರೋಧವಿದೆಯೆಂದು ಶ್ರೀ ತ.ನ.ಪ್ರಭುದೇವ್, ಸದಸ್ಯರು ಮನವಿಯನ್ನು ನೀಡಿ, ಸದರಿ ಮನವಿಯನ್ನು ನಡವಳಿ ಪುಸ್ತಕದಲ್ಲಿ ಚಿಟಾಕಾಯಿಸಲು ಕೋರಿದ್ದು, ಈ ಮನವಿಯಲ್ಲಿ ಶ್ರೀ ಡಿ.ಎ. ಚಂದ್ರಶೇಖರ್, ಶ್ರೀಮತಿ ಜಯಮ್ಮ, ಶ್ರೀಮತಿ ಆರ್. ಅನುಸೂಯ, ಶ್ರೀ ಬಿ.ಜಿ. ಹೇಮಂತರಾಜು, ಶ್ರೀ ವಿ.ಎಸ್. ರವೀಕುಮಾರ್, ಶ್ರೀಮತಿ ಶಂಶುನ್ನೀಸಾ, ಶ್ರೀಮತಿ ಯಶೋಧಮ್ಮ ಸದಸ್ಯರುಗಳು ಸಹ ವಿರೋಧವಿದೆ ಎಂಬುದಾಗಿ ಸಭೆಯಲ್ಲಿ ಚರ್ಚಿಸಿರುವುದನ್ನು ನಡವಳಿಕೆ ಪುಸ್ತಕದಲ್ಲಿ ನಮೂದಿಸದೇ ಇರುವುದಕ್ಕೆ ಅಸಮದಾನ ವ್ಯಕ್ತಪಡಿಸಿದ್ದು, ಅದರಂತೆ ಸದರಿ ಸದಸ್ಯರುಗಳ ಹೆಸರಗಳನ್ನು ನಡವಳಿಕೆ ಪುಸ್ತಕದಲ್ಲಿ ನಮೂದಿಸಿ ದಾಖಲಿಸಲಾಯಿತು. ಹಾಗೂ ದಿನಾಂಕ:29-01-2009ರ ಸಾಮಾನ್ಯ ಸಭೆಯ ವಿಷಯ ಸಂಖ್ಯೆ.13/2ರ ತೀರ್ಮಾನವನ್ನು ರದ್ದುಗೊಳಿಸಿ 12ನೇ ಹಣಕಾಸು ಮುಕ್ತ ನಿಧಿಯ ರೂ.10.00ಲಕ್ಷಗಳನ್ನು ಐ.ಡಿ.ಎಸ್.ಎಂ.ಟಿ. ಮಳಿಗೆಗಳ ವಿದ್ಯುತ್ಚ್ಛಕ್ತಿ ಸಂಪರ್ಕವನ್ನು ಕಲ್ಪಿಸಿಕೊಂಡು ನಗರಸಭೆಯ ಸಂಪನ್ಮೂಲಗಳನ್ನು ಕ್ರೂಡೀಕರಿಸಿಕೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ದಿನಾಂಕ:16-02-2009ರಂದು ನಡೆದ ಸ್ಥಾಯಿ ಸಮಿತಿ ಸಭೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಲಾಯಿತು ಎಂಬುದನ್ನು ರದ್ದುಪಡಿಸಲಾಯಿತು.

**<u>ವಿಷಯ ಸಂಖ್ಯೆ:3</u>**

ಜನವರಿ-2009ರ ಮಾಹೆ ಜನನ-ಮರಣಗಳ ವಿವರಗಳನ್ನು ಓದಿ ದಾಖಲಿಸುವ ವಿಚಾರ.

| ಕ್ರ.ಸಂ | ಮಾಹೆವಾರು | ಜನನ | | | ಮರಣ | | |
|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 1 | ಜನವರಿ-2009 | 63 | 102 | 165 | 40 | 18 | 58 |

**<u>ತೀರ್ಮಾನ ಸಂಖ್ಯೆ:3</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಜನವರಿ-2009ರ ಮಾಹೆಯ ಜನನ-ಮರಣ ವಿವರಗಳನ್ನು ಓದಿ ದಾಖಲಿಸಲಾಯಿತು.

**<u>ವಿಷಯ ಸಂಖ್ಯೆ:4</u>**

4) ಜನವರಿ-2009ರ ಮಾಹೆ ಜಮಾ-ಖರ್ಚುಗಳನ್ನು ಅನುಮೋದಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:4</u>**

ಸದರಿ ವಿಷಯವನ್ನು ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಗಿ ವಿದ್ಯುತ್ ಶುಲ್ಕ ಪಾವತಿಯು ಹೆಚ್ಚಾಗಿದ್ದು, ವಸೂಲಾತಿಯು ಕುಂಠಿತವಾಗಿರುವುದರಿಂದ ಶೀಘ್ರವಾಗಿ ಬಾಕಿ ಇರುವ ವಸೂಲಾತಿಯನ್ನು ಕೈಗೊಳ್ಳಲು ಪ್ರಥಮ ದರ್ಜೆ ರಾಜಸ್ವ ನಿರೀಕ್ಷಕರಿಗೆ ಸೂಚಿಲಾಯಿತು. ಮತ್ತು ಪ್ರತಿ ಮಾಹೆಯ ವಿದ್ಯುತ್ ಬಿಲ್ ಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿ, ವಿದ್ಯುತ್ ಬಿಲ್ ಪಾವತಿ ಮಾಡದೇ ಇರುವ ಮಳಿಗೆಗಳ ವಿದ್ಯುತ್ ಸಂಪರ್ಕವನ್ನು ಕಡಿತ ಮಾಡಲು ಸೂಚಿಸಲಾಯಿತು. ಪೌರಕಾರ್ಮಿಕರಿಗೆ ಪಾದರಕ್ಷೆಗಳ ಖರೀದಿ ಖರ್ಚಿನ ವಿಚಾರದಲ್ಲಿ ಚರ್ಚಿಸಲಾಗಿ ಪಾದರಕ್ಷೆಗಳನ್ನು ಖರೀದಿಸದೇ, ಪಾದರಕ್ಷೆಗಳ ಖರ್ಚಿನ ಅನುಮೋದನೆಯನ್ನು ನೀಡಲು ಕೆಲವು ಸದಸ್ಯರು ಅಸಮದಾನವನ್ನು ವ್ಯಕ್ತಪಡಿಸಿದ್ದು, ನಂತರ ಪಾದರಕ್ಷೆಗಳನ್ನು ಖರೀದಿಸಿ ಮುಂದಿನ ಸ್ಥಾಯಿಸಮಿತಿ ಸಭೆಯಲ್ಲಿ ದಾಸ್ತಾನು ವಿವರವನ್ನು ಹಾಗೂ ಪಾದರಕ್ಷೆಗಳನ್ನು ಖರೀದಿಸಿರುವ ಬಗ್ಗೆ ಪರಿಶೀಲಿಸಿದ ನಂತರ ನೌಕರರಿಗೆ ವಿತರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:5**

5) ಮಾನ್ಯ ಗೌರವಾನ್ವಿತ ಸದಸ್ಯರು ಹಾಗೂ ಸಾರ್ವಜನಿಕರಿಂದ ಬಂದಿರುವ ಕಾಮಗಾರಿಗಳ ಅರ್ಜಿಗಳ ವಿಚಾರ.

**ತೀರ್ಮಾನ ಸಂಖ್ಯೆ:5**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಸದಸ್ಯರುಗಳು ನೀಡಿರುವಂತಹ ಅರ್ಜಿಗಳಲ್ಲಿ ಪ್ರತಿ ವಾರ್ಡಿನ ಸದಸ್ಯರಿಗೂ ನಗರಸಭಾ ನಿಧಿಯಿಂದ 75,000/- ರೂ.ಗಳ ಅಂದಾಜು ಮೊತ್ತದಲ್ಲಿ ತುರ್ತು ಕಾಮಗಾರಿಗಳನ್ನು ನಿರ್ವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**6) ಅಧ್ಯಕ್ಷರ ಅಪ್ಪಣೆ ಮೇರೆಗೆ ತರಬಹುದಾದ ಇತರೆ ವಿಷಯಗಳು:**

**ವಿಷಯ ಸಂಖ್ಯೆ:6/1**

ಅಧ್ಯಕ್ಷರ ವಾಹನವು (ಸಂಖ್ಯೆ.KA-04-N-7497 ಅಂಬಾಸಡರ್ ಕಾರು) ರಿಪೇರಿಗೆ ಬಂದಿರುವುದರಿಂದ ಹಾಗೂ ಆರ್.ಟಿ.ಓ. ಕಛೇರಿಯ ವರದಿಯಂತೆ (1)ಇಂಜಿನ ಓವರ್ ಆಯಿಲ್ ಅಂಡ್ ಇಂಜಿನ್ ರೀ ಬೋರಿಂಗ್ ಪಾರ್ಟ್ಸ್ (2) ಇಂಜಿನ್ ಓವರ್ ಆಯಿಲ್ (3) ಡೀಸಜಲ್ ಪಂಪ್ ಓವರ್ ಆಯಿಲ್ (4) ಇಂಜಿನ್ ರೀಬೋರಿಂಗ್ ಲೇತ್ ಲೇಬರ್ (5) ಸೆಲ್ಫ್ ಸ್ಟಾರ್ಟ್ ಓವರ್ ಆಯಿಲ್, ಡೈನಮೋ ಓವರ್ ಆಯಿಲ್, ಎಲೆಕ್ಟ್ರಿಕಲ್ ಚೆಕಪ್ (6) ಫ್ರಂಟ್ ಸಸ್ಪೆಷನ್ ಓವರ್ ಆಯಿಲ್ (7) ಕಿನ್ ಪಿನ್ ವರ್ಕ್ ಲೇತ್ (8) ಸಸ್ಪೆಷನ್ ಓವರ್ ಆಯಿಲ್ ಆಫ್ ಸ್ಪೇರ್ ವಾಟರ್ಸ್ ರಿಪೇರಿಗಳನ್ನು ಮಾಡಿಸುವ ವಿಚಾರ.

**ತೀರ್ಮಾನ ಸಂಖ್ಯೆ:6/1**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಅಧ್ಯಕ್ಷರ ವಾಹನವನ್ನು ಸುಮಾರು 15ವರ್ಷಗಳ ಹಿಂದೆ ಖರೀದಿಸಿದ್ದು, ಮತ್ತು ಆರ್.ಟಿ.ಓ. ಕಛೇರಿಯಿಂದ ಸದರಿ ವಾಹವನ್ನು ರಿಪೇರಿ ಮಾಡಿಸುವಂತೆ ವರದಿ ನೀಡಿರುವುದರಿಂದ ಹಾಗೂ ಅಧ್ಯಕ್ಷರಿಗೆ ವಾಹನವು ಅತ್ಯಾವಶ್ಯಕವಾಗಿರುವುದರಿಂದ ಅತೀ ಜರೂರಾಗಿ ಮೇಲ್ಕಂಡ ಎಲ್ಲಾ ರಿಪೇರಿಗಳನ್ನು ಮಾಡಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:6/2**

ನಗರ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ ರಾಜಕಾಲುವೆಯನ್ನು ತೆರವುಗೊಳಿಸುವ ವಿಚಾರ.

**ತೀರ್ಮಾನ ಸಂಖ್ಯೆ:6/2**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ರಾಜಕಾಲುವೆಗಳು ಮತ್ತು ಕರೆಗಳ ಒತ್ತುವರಿಯನ್ನು ತೆರವುಗೊಳಿಸಲು ನಗರ ವ್ಯಾಪ್ತಿಯಲ್ಲಿ ಸರ್ಕಾರದ ಆದೇಶದಂತೆ ಹಾಗೂ ತಹಶೀಲ್ದಾರ್ ರವರ ಸರ್ವೆ ಕಾರ್ಯಾಚರಣೆಯ ವರದಿಯಂತೆ ಒತ್ತುವರಿ ಮಾಡಿಕೊಂಡಿರುವವರಿಗೆ ನೋಟೀಸ್ ಜಾರಿ ಮಾಡಿ ಬಿ.ಎಂ.ಆರ್.ಡಿ. ಕಛೇರಿಯವರಿಗೆ ವರದಿ ಸಲ್ಲಿಸಿ, ಒತ್ತುವರಿ ಮಾಡಿಕೊಂಡಿರುವ ಸ್ವತ್ತನ್ನು ತೆರವುಗೊಳಿಸಲು ಕಾನೂನಿ ರೀತ್ಯಾ ಕ್ರಮ ಜರುಗಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:6/3**

10ನೇ ಹಣಕಾಸು ಯೋಜನೆಯಡಿಯಲ್ಲಿ ನಿರ್ಮಾಣವಾಗಿರುವ 14 ಅಂಗಡಿ ಮಳಿಗೆಗಳ ಪರವಾನಗಿಯ ಕಾಲಾವಾಧಿಯು ಮುಗಿದಿದ್ದು, ಪರವಾನಗಿಯ ಕಾಲಾವಧಿಯನ್ನು ನವೀಕರಿಸುವ ವಿಚಾರ.

**ತೀರ್ಮಾನ ಸಂಖ್ಯೆ:6/3**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಅವಧಿ ಮುಕ್ತಾಯವಾಗಿರುವ ಅಂಗಡಿ ಮಳಿಗೆಗಳಿಗೆ ಹಾಲಿ ವಿಧಿಸಿರುವ ಪರವಾನಿಗೆಯ ಮೇಲೆ ಶೇ.30ರಷ್ಟು ದರವನ್ನು ಹೆಚ್ಚಿಸಲು ಚರ್ಚಿಸಲಾಗಿ ಈ ಬಗ್ಗೆ ಮಳಿಗೆಗಳ ಪರವಾನಿಗೆದಾರರು ಆಕ್ಷೇಪವನ್ನು ವ್ಯಕ್ತಪಡಿಸಿದಲ್ಲಿ ಶೇಕಡ. 25ರಷ್ಟು ದರವನ್ನು ಹೆಚ್ಚಿಸಿ ಪರವಾನಿಗೆಯನ್ನು ನವೀಕರಿಸಿಕೊಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:6/4**

ದಿನಾಂಕ:16-02-2009ರಂದು ನಡೆದ ವಿಶೇಷ ಸಭೆಯ ವಿಷಯ ಸಂಖ್ಯೆ.4ರ ತೀರ್ಮಾನದಂತೆ ದಿನಗೂಲಿ ನೌಕರರ ವೇತನವನ್ನು ಪರಿಷ್ಕರಿಸುವ ವಿಚಾರ.

**ತೀರ್ಮಾನ ಸಂಖ್ಯೆ:6/4**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ದಿನಗೂಲಿ ನೌಕರರ ವೇತನವನ್ನು 5ನೇ ವೇತನದ ಪರಿಷ್ಕೃತ ವೇತನ ಶ್ರೇಣಿಯಲ್ಲಿರುವ ತತ್ಸಮಾನ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರಿಗೆ ಪೌರಾಡಳಿತ ನಿರ್ದೇಶನಾಲಯದ ಪತ್ರ ಸಂಖ್ಯೆ.ಪೌನಿ/ಕಾಕೋ/4/03-04 ದಿನಾಂಕ:15-01-2005ರ ರೀತ್ಯಾ ನಿರ್ದೇಶಿಸಿರುವಂತೆ ಕನಿಷ್ಟ ವೇತನವನ್ನು ಮಾತ್ರ ಪಾವತಿಸುವಂತೆ ಹಾಗೂ ವ್ಯತ್ಯಾಸ ಮೊತ್ತವನ್ನು ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:6/5**

ಶ್ರೀ ತ.ನ.ಪ್ರಭುದೇವ್ ಸದಸ್ಯರು ಶೇ.18ರ ನಿಧಿಯಡಿಯಲ್ಲಿ ನೀಡಿರುವ ಅರ್ಜಿಯ ವಿಚಾರ.

**ತೀರ್ಮಾನ ಸಂಖ್ಯೆ:6/5**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಶೇ.18ರ ನಿಧಿಯಡಿಯಲ್ಲಿ ಕಾಯ್ದಿರಿಸಿರುವ 25.00ಲಕ್ಷ ರೂ.ಗಳನ್ನು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗದವರನ್ನು ಸದಸ್ಯರುಗಳು ಗುರ್ತಿಸಿದವರಿಗೆ ತಲಾ 5,000/-ರೂ.ಗಳಂತೆ ಕೊಳಚೆ ನಿರ್ಮೂಲನ ಮಂಡಳಿಯವರು ನಿರ್ಮಿಸುತ್ತಿರುವ ವಸತಿ ಸೌಲಭ್ಯಕ್ಕೆ ಶೇಕಡ 18ರ ನಿಧಿಯಿಂದ ಧನಸಹಾವನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:6/6**

ವೀರಭದ್ರನಪಾಳ್ಯದ ಸರ್ಕಾರಿ ಶಾಲೆ ಕಟ್ಟಡಕ್ಕೆ ಶ್ರೀ ಸೈಯದ್ ಅಲ್ತಾಫ್ ಹುಸೇನ್‌ರವರ ಸ್ವತ್ತಿನ ಸಂಖ್ಯೆ:1982/1973ಡಿ1660ರ ಜಾಗವನ್ನು ಬಿಟ್ಟುಕೊಡಲು ಒಪ್ಪಿದ್ದು, ಸದರಿಯವರಿಗೆ ಬದಲಿ ನಿವೇಶನ ನೀಡುವ ವಿಚಾರ.

**ತೀರ್ಮಾನ ಸಂಖ್ಯೆ:6/6**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಶ್ರೀ ಸೈಯದ್ ಅಲ್ತಾಫ್ ಹುಸೇನ್ ಬಿನ್. ಸೈಯದ್ ಮಹ್ಮದ್, ವಿಕ್ಟೋರಿಯ ರಸ್ತೆ, ಕಾರ್ಪೋರೇಷನ್ ಕ್ವಾಟ್ರಸ್, 1/9ನೇ ರಸ್ತೆ, ಬೆಂಗಳೂರು-47 ರವರು ಸ್ವತ್ತಿನ ಸಂಖ್ಯೆ.1982/1973ಡಿ1660ರ ಸ್ವತ್ತಿನಲ್ಲಿ ಈ ಹಿಂದೆ ವೀರಭದ್ರನಪಾಳ್ಯದ ಸರ್ಕಾರಿ ಶಾಲೆಗೆ 40x40 ಅಡಿಗಳ ಖಾಲಿ ನಿವೇಶವನ್ನು ದಾನವಾಗಿ ಬಿಟ್ಟುಕೊಟ್ಟಿದ್ದು, ಉಳಿಕೆ ಇರುವ 50x40 ಅಡಿಗಳನ್ನು ಶಾಲೆಗೆ ಬಿಟ್ಟುಕೊಡಲು ಒಪ್ಪಿರುವುದರಿಂದ ಸದರಿ ಸ್ವತ್ತಿಗೆ ಬದಲಾಗಿ ಬೇರೆ ಜಾಗದಲ್ಲಿ ಸದರಿಯವರಿಗೆ ಸೂಕ್ತ ಸ್ಥಳವನ್ನು ಪರಿಶೀಲನೆ ಮಾಡಿ, ಕೌನ್ಸಿಲ್ ಸಭೆಯ ತೀರ್ಮಾನದಂತೆ ಬದಲಿನಿವೇಶನವನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:6/7</u>**

ನಗರಸಭಾ ಕಾರ್ಯಾಲಯದ ದೈನಂದಿನ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಪರಿಸರ ಅಭಿಯಂತರರವರಿಗೆ ವಾಹನಗಳ ಲಭ್ಯತೆ ಇಲ್ಲವಾದ್ದರಿಂದ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ರವರ ಪತ್ರ ಸಂಖ್ಯೆ.ಎಂಯುಎನ್(3)/ಸಿಆರ್/118/2008-09 ದಿನಾಂಕ:02-01-2009ರ ಪತ್ರದಂತೆ ಎರಡು ಟಾಟ ಇಂಡಿಕಾ ವಾಹನಗಳನ್ನು ಗುತ್ತಿಗೆ ಆಧಾರದ ಮೇಲೆ ಪಡೆಯಲು ದರಗಳನ್ನು ಅನುಮೋದಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:6/7</u>**

ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ನಗರಸಭಾ ಕಾರ್ಯಾಲಯದ ಆರ್ಥಿಕ ಪರಿಸ್ಥಿತಿ ಸರಿಇಲ್ಲದ ಕಾರಣ ಎರಡು ವಾಹನಗಳನ್ನು ಗುತ್ತಿಗೆಗೆ ಪಡೆಯುವ ಬದಲಾಗಿ, ಗುತ್ತಿಗೆಯಲ್ಲಿ ಭಾಗವಹಿಸಿರುವ ಶ್ರೀ ರಾಘವೇಂದ್ರ ಟ್ರಾವೆಲ್ಸ್, ರಾಜಾಜಿನಗರ, ಬೆಂಗಳೂರು ರವರು ನಮೂದಿಸಿರುವ ಕಡಿಮೆ ದರ ಅಂದರೆ ವಾಹನ ಒಂದಕ್ಕೆ ರೂ.17,910/- (ಹದಿನೇಳು ಸಾವಿರದ ಒಂಬೈನೂರ ಹತ್ತು ರೂಪಾಯಿಗಳು ಮಾತ್ರ) ಗಳ ದರಗಳನ್ನು ಅಂಗೀಕರಿಸಿ ಒಂದು ವಾಹನವನ್ನು ಗುತ್ತಿಗೆ ಆಧಾರದ ಮೇಲೆ ಪಡೆಯಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

---

(ಜಿ.ರಾಮಕೃಷ್ಣ)
ಅಧ್ಯಕ್ಷರು,
ನಗರಸಭೆ, ದೊಡ್ಡಬಳ್ಳಾಪುರ.

**" ನಕಲು ಪ್ರತಿ "**

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ.**

**ನಕಲು ಪ್ರತಿ"**

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ.**